**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-750/2022 **PW**: 1

**ದಿಃ 06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಆರ್ ಜಿ ಬಿ ವಕೀಲರಿಂದ**

**1.** ಅಮೀತ ಬಾಸ್ಕರರವರು ನನ್ನ ಮನೆಯವರಾಗಬೇಕು. 2 ನೇ ಅರ್ಜಿದಾರರು ನನ್ನ ಅಕ್ಕಳಾಗಬೇಕು. ನಾಲ್ಕು ಮತ್ತು ಐದನೇಯ ಅರ್ಜಿದಾರರು ನಿಮ್ಮ ಬಳಿಯೇ ಇರುತ್ತಾರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 5 ನೇ ಅರ್ಜಿದಾರರಿಗೆ ಇಬ್ಬರು ಮಕ್ಕಳು, ಅವರೆಂದರೆ ಅಮೀತ ಮತ್ತು ಜ್ಯೋತಿ. ಸದರಿ ಮೃತ ಅಮೀತ ನಡೆಸುತ್ತಿದ್ದ ಬೈಕ ನನ್ನ ಮನೆಯವರು ಕೆಲಸ ಮಾಡುತ್ತಿದ್ದ ಕಂಪನಿಯ ಹೊಸ ಬೈಕ ಆಗಿದ್ದು ಅದನ್ನು ಗೋಕುಲದಿಂದ ಕೇಶ್ವಾಪೂರಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ನನ್ನ ಮನೆಯವರು ಶಾಂತೇಶ ಹೊಂಡಾ ಪ್ರೈವೇಟ ಲಿಮೀಟಡನಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದರು. ಈ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಅಪಘಾತ ಆಯಿತು ಎಂದು ಹೇಳಿದ್ದು ನಾನು ಅದನ್ನು ಖುದ್ದಾಗಿ ನೋಡಿಲ್ಲವೆಂದರೆ ಸರಿ. ಸದರಿ ಅಪಘಾತ ಹೇಗೆ ಆಯಿತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಪೋಲೀಸರ ವರದಿ ಪ್ರಕಾರ ಸಮೀರ ಎಂಬುವವರು ಗಾಡಿಯನ್ನು ವೇಗವಾಗಿ ಓಡಿಸಿಕೊಂಡು ಬಂದಿದ್ದರಿಂದ ಆಗಿದೆ ಎಂದು ನುಡಿಯುತ್ತಾರೆ. ಅಪಘಾತವಾದ ಬಗ್ಗೆ ನನಗೆ ವಿಷಯವನ್ನು ಸಾರ್ವಜನಿಕರು ಪೋನ ಮೂಲಕ ತಿಳಿಸಿರುತ್ತಾರೆ. ಅಪಘಾತವಾದ ತಕ್ಷಣ ಅವರನ್ನು ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಸದರಿ ಆಸ್ಪತ್ರೆಯಲ್ಲಿ ಎಂ ಎಲ್ ಸಿ ನೊಂದಾದ ಬಗ್ಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿ ಎಲ್ಲ ದಾಖಲೆಗಳನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ನನ್ನ ಮನೆಯವರು ಕೆಎಂಸಿಯಲ್ಲಿಯೆ ಎಲ್ಲ ಚಿಕಿತ್ಸೆ ಪಡೆದಿರುತ್ತಾರೆಂದರೆ ಸಾಕ್ಷಿ ಇಲ್ಲ ದಿಃ05-05-2025 ಕ್ಕೆ ಬಾಲಾಜಿ ಆಸ್ಪತ್ರೆಗೆ ವರ್ಗಾವಣೆ ಮಾಡಿದೇವು ಎನ್ನುತ್ತಾರೆ. ಸದರಿ ಕೆಎಂಸಿಯವರು ನಿಮಗೆ ಅಲ್ಲಿಗೆ ಕರೆದುಕೊಂಡು ಹೋಗಿರಿ ಎಂದು ಹೇಳಿದರಾ ಅಥವಾ ನೀವೆ ಕರೆದುಕೊಂಡು ಹೋಗಿದ್ದೀರಿ ಎಂದರೆ ಸಾಕ್ಷಿ ನಮ್ಮ ಮನೆಯವರ ಕಂಡಿಷನ ಬಹಳ ಕಠಿಣವಾಗಿದ್ದರಿಂದ ಮತ್ತು ನಮ್ಮ ಇಚ್ಛೆ ಪ್ರಕಾರ ನಾವೆ ಕರೆದುಕೊಂಡು ಬಂದಿರುತ್ತೇವೆ ಎನ್ನುತ್ತಾರೆ. ಕೆಎಂಸಿಯಲ್ಲಿ ಇರುವವರೆಗೂ ಅವರಿಗೆ ಉಚಿತ ಚಿಕಿತ್ಸೆ

ಕೊಡುತ್ತಿದ್ದರು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 25 ಲಕ್ಷ್ಯಗಳಷ್ಟು ಖರ್ಚು ಮಾಡಿರುತ್ತೇವೆಂದು ಹೇಳಿದ್ದು ಅಷ್ಟು ಹಣವನ್ನು ಖರ್ಚು ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಅಷ್ಟು ಖರ್ಚು ಮಾಡಿದ್ದೇವೆ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ಬಿಲ್ ಗಳು 25 ಲಕ್ಷ್ಯ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ತೋರಿಸುವುದಿಲ್ಲವೆಂದರೆ ಸಾಕ್ಷಿ ನಾನು ಇನ್ನು ಕೂಡಾ 50 ಸಾವಿರದಷ್ಟು ಬಿಲ್ ತುಂಬಬೇಕಾಗಿದ್ದು ಕಂಪನಿ ನನಗೆ ಕೊಟ್ಟಿಲ್ಲವಾದ ಕಾರಣ ನಾನು ಬಿಲ್ ಪೆಂಡಿಂಗ ಇಟ್ಟಿದ್ದೇನೆ ಎನ್ನುತ್ತಾರೆ. ಕಂಪನಿಯವರು ನಿಮಗೆ ಇನ್ಸೂರನ್ಸ ಹಣ, ಮೆಡಿಕಲ್ ಬಿಲ್ ಇಂತಹವುಗಳನ್ನು ಕೊಡಲಿಲ್ಲವೆಂದರೆ ಸಾಕ್ಷಿ ಇನ್ನು ಕೊಟ್ಟಿಲ್ಲ ಎನ್ನುತ್ತಾರೆ. ಅಮೀತ್ ಇವರಿಗೆ 1 ಲಕ್ಷ್ಯ ರೂಪಾಯಿ ಮುಂದೆ ದುಡಿಯುತ್ತಿದ್ದರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿಯವರಿಗೆ ತಿಂಗಳಿಗೆ 36 ಸಾವಿರದಿಂದ 40 ಸಾವಿರ ದುಡಿಯುತ್ತಿದ್ದರು ಎಂದು ತೋರಿಸಲು ವೇತನ ಪ್ರಮಾಣ ಪತ್ರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ  ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿಯವರಿಗೆ 1 ಲಕ್ಷ್ಯ ರೂಪಾಯಿ ಮುಂದೆ ದುಡಿಯುತ್ತಾರೆಂದು ಅವರು ಇದ್ದಂತಹ ಕಂಪನಿಯಲ್ಲಿ ದುಡಿಯುವಂತಹ ಸೌಲಭ್ಯ ಇರಲಿಲ್ಲವೆಂದರೆ ಸಾಕ್ಷಿ ಅವರು ಬದುಕಿದ್ದರೆ ಇನ್ನು ಕೂಡಾ ದುಡಿಯುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

2. ಅಪಘಾತವಾಗಿದೆ ಎಂದು ಹೇಳಲಾದ ಘಟನೆಯಲ್ಲಿ ನನ್ನ ಮನೆಯವರ ತಪ್ಪು ಕೂಡಾ ಇದೆ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ನಾನು ಸಲ್ಲಿಸಿರುವ ದಾಖಲೆಗಳನ್ನು ನೋಡಿಕೊಂಡಿರುತ್ತೇನೆ. ಚಾರ್ಜಶೀಟ ಪ್ರಕಾರ ಸಮೀರ ಎನ್ನುವವರಿಗೆ ಡಿಎಲ್ ಇಲ್ಲ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿ ಅವರಿಗೆ ಲೈಸನ್ಸ ಇತ್ತು ಎಂದು ನಮಗೆ ಹೇಳಿದ್ದರು ಎನ್ನುತ್ತಾರೆ. ಸದರಿಯವರಿಗೆ ಲೈಸನ್ಸ ಇರದ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸಾಕ್ಷಿ ಅವರಿಗೆ ಲೈಸನ್ಸ ಇತ್ತು ಎಂದು ಹೇಳಿದ್ದರು ಎನ್ನುತ್ತಾರೆ.

**3.** ದಕ್ಷಾ ಪಡಸಾಲ ಇವರು ನನ್ನ 2 ವರ್ಷದ ಮಗ. ದಾವಾಲಬಾಯಿ ಪಡಸಾಲ ನನ್ನ ಗಂಡ ಎಂದರೆ ಸರಿ. ದಿಃ06.04.2022 ರಂದು ಜಿಜೆ 19 ಎಎ-8316 ಈ ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಕಾರು ಪಟೋಲಿಯಾ ಇವರಿಗೆ ಸಂಬಂದಿಸಿದ ಕಾರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಕಾರಿನಲ್ಲಿ ದಿಃ06.04.2022 ರಂದು ನನ್ನ ಅತ್ತೆ, ಮಾವ, ಮಗ, ಮಗಳು ನಾನು ಮತ್ತು ಪಟೋಲಿಯಾ ಇವರ ಸಹೋದರಿ ಒಟ್ಟು 12 ಮಂದಿ ಹೊರಟಿದ್ದೆವು ಎಂದರೆ ಸಾಕ್ಷಿ ಒಂಬತ್ತು ಮಂದಿ ಇದ್ದೆವು ಎನ್ನುತ್ತಾರೆ. ಸದರಿ ಗಾಡಿಯಲ್ಲಿ ನಿಮ್ಮ ಅತ್ತೆ ಮಾವ ಇದ್ದರಾ

ಎಂದರೆ ಸಾಕ್ಷಿ ಇದ್ದರು ಎನ್ನುತ್ತಾರೆ. ಪಟೋಲಿಯಾ ಇವರ ಪತ್ನಿ ಜಯಶ್ರೀ ಇವರು ಇದ್ದರು. ಜಯಶ್ರೀ ಜೊತೆಯಲ್ಲಿ ನನ್ನ ಮಗ ಮತ್ತು ಮಗಳು ಹಾಗೂ ನಾನು ಇದ್ದೆವು ಎಂದರೆ ಸಾಕ್ಷಿ ಇದ್ದೆವು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅವರವರ ಜೊತೆಯಲ್ಲಿ ಅವರವರು ಇದ್ದರು ಎನ್ನುತ್ತಾರೆ. ನನ್ನ ಗಂಡ ಚಲಾಯಿಸುತ್ತಿದ್ದ ಕಾರಿನಲ್ಲಿ 12 ಜನ ಪ್ರಯಾಣಿಸುತ್ತಿದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಸದರಿ ನನ್ನ ಗಂಡ ಚಲಾಯಿಸುತ್ತಿದ್ದ ವಾಹನಕ್ಕೆ ಆ ದಿನ ವಿಮೆ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎನ್ನುತ್ತಾರೆ. ಸದರಿ ಜಿಜೆ 19 ಎಎ-8316 ಈ ವಾಹನಕ್ಕೆ ವಿಮೆ ಇತ್ತು ಎಂದು ಹೇಳಿದ್ದು ವಿಮಾ ಪಾಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಇನ್ಸುರೆನ್ಸ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಂದು ನನ್ನ ಯಜಮಾರನರು ಓಡಿಸುತ್ತಿದ್ದ ವಾಹನಕ್ಕೆ ವಿಮೆ ಇರಲಿಲ್ಲ ಆದರೂ ನಾನು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ದಿನಾಂಕಃ06.04.2022 ರಂದು ಅಪಘಾತವಾಯಿತು ಎಂದು ಹೇಳಲಾಗಿದ್ದು ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದಲೇ ಆಗಿದೆ ಎಂದು ಚಾರ್ಜಶೀಟ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಅವರ ತಪ್ಪು ಇಲ್ಲ ಎನ್ನುತ್ತಾರೆ. ಕೆಎ-63 ಎಫ್ 0105 ನ ಚಾಲಕನವಿರುದ್ದ ಇದ್ದ ಕ್ರಿಮಿನಲ್ಲ ಮೊಕದ್ದಮೆಯಿಂದ ಆತನ ತಪ್ಪು ಯಾವದು ಇಲ್ಲ ಎಂದು ಖುಲಾಸೆಯಾಗಿದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಅಪಘಾತದಿಂದ ನನ್ನ ಮಗನಿಗೆ ತರಚಿದ ಗಾಯಗಳು ಹಾಗೂ ಮೂಗಿಗೆ ಪೆಟ್ಟು ಬಿದ್ದಿದೆ ಎಂದು ಬರೆದಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿನಾಂಕಃ06.04.2022 ರಂದು ನನ್ನ ಮಗನಿಗೆ ಚಿಕಿತ್ಸೆ ನೀಡಿ ಅದೇ ದಿನ ಡಿಸ್ಚಾರ್ಜ ಮಾಡಿರುತ್ತಾರೆಂದರೆ ಸರಿ. ನಾನು ಹಾಜರುಪಡಿಸಿರುವ 12500/- ರೂ ಬಿಲ್ಲುಗಳು ಸೃಷ್ಟಿ ಮಾಡಿಕೊಂಡ ಬಿಲ್ಲುಗಳು ಅಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 10 ಲಕ್ಷ ರೂ ಪರಿಹಾರ ಕೇಳಿದ್ದು ಅದರಲ್ಲಿ ಯಾವ ಆದಾರದ ಮೇಲೆ ಕೇಳುತ್ತಿದ್ದೇನೆಂಬ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ನಾನೇನು ಹೇಳಲಿ ಎನ್ನುತ್ತಾರೆ. ನನ್ನ ಮಗನಿಗೆ ಆದ ಸದರಿ ಗಾಯಗಳು ಈಗಾಗಲೇ ಗುಣಮುಖವಾಗಿವೆ ಎಂದರೆ ಸಾಕ್ಷಿ ಆಗಿವೆ ಎನ್ನುತ್ತಾರೆ. ನನ್ನ ಮಗ ಈಗ ಶಾಲೆಗೆ ಹೋಗುತ್ತಿದ್ದಾನೆ. ಸದರಿ ಅಪಘಾತವಾದ ದಿನಾಂಕಃ06.04.2022 ರಂದು ನನ್ನ ಮಗ ಶಾಲೆಗೆ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಹೋಗುತ್ತಿರಲಿಲ್ಲ ಎನ್ನುತ್ತಾರೆ. ನನ್ನ ಮಗನಿಗೆ ಯಾವದೇ ರೀತಿಯ ಅಂಗನ್ಯೂನತೆ ಆಗಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದಾಗಿರುವ ಕಾರಣ ವಿಮಾ ಕಂಪನಿ ನಮಗೆ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

1, 2 ಮತ್ತು 4 ನೇ ಎದುರುದಾರ ಪರ ವಕೀಲರು ಮೇಲೆ ಹೇಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವದಾಗಿ ಕೋರಿರುತ್ತಾರೆ. ಕಾರಣ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**